# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1428 (1515)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು)** |
| **ಉತ್ತರಿಸಬೇಕಾದ ದಿನಾಂಕ** | **19 /12/2025** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೇಂದ್ರ ಸರ್ಕಾರದ ಅನುದಾನ ಅಡಿಯಲ್ಲಿ/ಸಹಾಯಧನ ಅಡಿಯಲ್ಲಿ ರಾಜ್ಯದಲ್ಲಿ ಎಷ್ಟು ಕಾರ್ಮಿಕ ಯೋಜನೆಗಳು ಜಾರಿಯಲ್ಲಿ ಇರುತ್ತವೆ; ಈ ಯೋಜನೆಗೆ ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರ ನೀಡಿರುವ ಅನುದಾನಗಳು ಎಷ್ಟು;</td><td>ಕಾರ್ಮಿಕ ಇಲಾಖೆಯಲ್ಲಿ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿ ಭದ್ರತಾ ಮಂಡಳಿ, ಮತ್ತು ಕರ್ನಾಟಕ ಕಾರ್ಮಿಕರ ಕಲ್ಯಾಣ ಮಂಡಳಿಗಳಲ್ಲಿ ಕೇಂದ್ರ ಸರ್ಕಾರದ ಅನುದಾನ ಅಡಿಯಲ್ಲಿ/ಸಹಾಯಧನ ಅಡಿಯಲ್ಲಿ ಯಾವುದೇ ಯೋಜನೆಗಳನ್ನು ಜಾರಿಗೊಳಿಸುತ್ತಿರುವುದಿಲ್ಲ.</td></tr>
<tr><td>ಆ)</td><td>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; ವೆಚ್ಚವಾಗಿರುವ ಅನುದಾನವೆಷ್ಟು;</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಆಡಳಿತಾತ್ಮಕ ವೆಚ್ಚ ಹಾಗೂ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯ ಲೆಕ್ಕಶೀರ್ಷಿಕೆ:2230-01-111-0-05ಗೆ ಸರ್ಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಗೊಳಿಸಲಾದ ಅನುದಾನ ಹಾಗೂ ವೆಚ್ಚದ ವಿವರ ಈ ಕೆಳಗಿನಂತಿದೆ.<br>
<table>
<tr><th colspan="2">2022-23<br>(ರೂ, ಲಕ್ಷಗಳಲ್ಲಿ)</th><th colspan="2">2023-24<br>(ರೂ, ಲಕ್ಷಗಳಲ್ಲಿ)</th><th colspan="2">2024-25<br>(ರೂ, ಲಕ್ಷಗಳಲ್ಲಿ)</th></tr>
<tr><th>ಬಿಡುಗಡೆ ಯಾದ ಅನುದಾನ</th><th>ವೆಚ್ಚ</th><th>ಬಿಡುಗಡೆ ಯಾದ ಅನುದಾನ</th><th>ವೆಚ್ಚ</th><th>ಬಿಡುಗಡೆ ಯಾದ ಅನುದಾನ</th><th>ವೆಚ್ಚ</th></tr>
<tr><td>1.00</td><td>*434.73</td><td>500.00</td><td>370.23</td><td>500.00</td><td>480.09</td></tr>
</table>
*ಹೆಚ್ಚುವರಿ ವೆಚ್ಚವನ್ನು ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದ ಅನುದಾನದಿಂದ ಭರಿಸಲಾಗಿದೆ.</td></tr>
<tr><td>ಇ)</td><td>ಅಸಂಘಟಿತ ಕಾರ್ಮಿಕ ಕಲ್ಯಾಣ ಭದ್ರತಾ ಕಾಯ್ದೆ ಅಡಿಯಲ್ಲಿ ರಾಜ್ಯದಲ್ಲಿ ಎಷ್ಟು ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಸರ್ಕಾರದ ಆದೇಶ ಸಂಖ್ಯೆ: ಕಾಇ 150 ಎಲ್‌ಇಟಿ 2018, ದಿನಾಂಕ:27-12-2018 ರನ್ವಯ ರಾಜ್ಯದಾದ್ಯಂತ 181 ಕಾರ್ಮಿಕ ಸೇವಾಕೇಂದ್ರಗಳನ್ನು ತೆರೆಯಲು ಆದೇಶವಾಗಿರುತ್ತದೆ. ಅದರಂತೆ, ರಾಜ್ಯದಾದ್ಯಂತ 169 ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲಾಗಿರುತ್ತದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಾಇ 230 ಎಲ್‌ಇಟಿ ದಿನಾಂಕ:25-09-2023ರನ್ವಯ, ತೆರೆಯಲಾದ ಎಲ್ಲಾ ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಗಿತಗೊಳಿಸುವಂತೆ ಸರ್ಕಾರವು</td></tr>
</table>

<table>
<tr><td></td><td></td><td>ಆದೇಶಿಸಿದ್ದು, ಅದರಂತೆ ಮಂಡಳಿಯ ವತಿಯಿಂದ ತೆರೆಯಲಾದ 169 ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಗಿತಗೊಳಿಸಲಾಗಿರುತ್ತದೆ.</td></tr>
<tr><td>ಈ)</td><td>ಕಾರ್ಮಿಕ ಇಲಾಖೆಯ ಅಡಿಯಲ್ಲಿ ಯಾವ ಯಾವ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ;(ಅವುಗಳ ವಿವರಗಳನ್ನು ಒದಗಿಸುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ 1) ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ 2) ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿ ಭದ್ರತಾ ಮಂಡಳಿ ಮತ್ತು 3) ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ.</td></tr>
<tr><td>ಉ)</td><td>ಕಾರ್ಮಿಕ ಇಲಾಖೆಯಲ್ಲಿ ನಿಯೋಜನೆಯ ಮೇಲೆ ಎಷ್ಟು ಅಧಿಕಾರಿಗಳು/ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ? (ಪೂರ್ಣ ಮಾಹಿತಿಯನ್ನು ಒದಗಿಸುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಡಳಿಗಳಲ್ಲಿ ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ ನೌಕರರು ವಿವರ ಈ ಕೆಳಕಂಡಂತಿವೆ.<br><br>
<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u><br>
ಈ ಮಂಡಳಿಯಲ್ಲಿ ಕೆಳಕಂಡ ಇಲಾಖೆಯಿಂದ ನಿಯೋಜನೆ ಮೇರೆಗೆ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.
<table>
<tr><th>ಕ್ರ.ಸಂ.</th><th>ಹೆಸರು</th><th>ಹುದ್ದೆ</th></tr>
<tr><td>1</td><td>ಕಾರ್ಮಿಕ ಇಲಾಖೆ</td><td>16</td></tr>
<tr><td>2</td><td>ರಾಜ್ಯ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನೆ ಇಲಾಖೆ</td><td>03</td></tr>
<tr><td>3</td><td>ಲೋಕೋಪಯೋಗಿ ಇಲಾಖೆ</td><td>04</td></tr>
<tr><td>4</td><td>ನಗರಾಭಿವೃದ್ಧಿ ಇಲಾಖೆ</td><td>01</td></tr>
<tr><td colspan="2">ಒಟ್ಟು</td><td>24</td></tr>
</table>
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:<br>
ಈ ಮಂಡಳಿಯಲ್ಲಿ ಕೆಳಕಂಡ ಇಲಾಖೆಯಿಂದ ನಿಯೋಜನೆ ಮೇರೆಗೆ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.
<table>
<tr><th>ಕ್ರ.ಸಂ.</th><th>ಹೆಸರು</th><th>ಹುದ್ದೆ</th></tr>
<tr><td>1</td><td>ಕಾರ್ಮಿಕ ಇಲಾಖೆ</td><td>3</td></tr>
</table>
<u>ಕಾರ್ಮಿಕರ ಕಲ್ಯಾಣ ಮಂಡಳಿ:</u><br>
ಈ ಮಂಡಳಿಯಲ್ಲಿ ಕೆಳಕಂಡ ಇಲಾಖೆಯಿಂದ ನಿಯೋಜನೆ ಮೇರೆಗೆ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.
<table>
<tr><th>ಕ್ರ.ಸಂ.</th><th>ಹೆಸರು</th><th>ಹುದ್ದೆ</th></tr>
<tr><td>1</td><td>ಕಾರ್ಮಿಕ ಇಲಾಖೆ</td><td>1</td></tr>
<tr><td>2</td><td>ರಾಜ್ಯ ಲೆಕ್ಕಪತ್ರ ಹಾಗೂ ಲೆಕ್ಕಪರಿಶೋಧನೆ ಇಲಾಖೆ</td><td>1</td></tr>
</table>
</td></tr>
</table>

**ಕಾಇ 507 ಎಲ್ಇಟಿ 2025**

**(ಸಂತೋಷ್ ಎಸ್. ಲಾಡ್)**

**ಕಾರ್ಮಿಕ ಸಚಿವರು**